# ಪದ್ಯಪಾಠ – 3 ಭರತ ಭೂಮಿ ನನ್ನ ತಾಯಿ

## ಅಭ್ಯಾಸ

ಅ. ಒಂದು ಪದ/ವಾಕ್ಯದಲ್ಲಿ ಉತ್ತರಿಸಿರಿ.

1. ಕವಿ ಕುವೆಂಪು ಅವರು ಭಾರತ ದೇಶವನ್ನು ಯಾರಿಗೆ ಹೋಲಿಸಿದ್ದಾರೆ?

ಉ. ಭಾರತ ದೇಶವನ್ನು ಹೆತ್ತ ತಾಯಿಗೆ ಹೋಲಿಸಿದ್ದಾರೆ.

2. ಭಾರತ ದೇಶದ ಸಿರಿಮುಡಿ ಯಾವುದು?

ಉ. ಹಿಮಾಲಯ ಪರ್ವತ ದೇಶದ ಸಿರಿಮುಡಿಯಾಗಿದೆ.

3. ಕವಿ ಕುವೆಂಪು ಅವರು ಗಂಗಾ ನದಿಯನ್ನು ಏನೆಂದು ಕರೆದಿದ್ದಾರೆ?

ಉ. ಗಂಗೆ, ದೇವಗಂಗೆ ಎಂದು ಕರೆದಿದ್ದಾರೆ.

4. ಯಾವ ಬಿರುಕುಗಳನ್ನು ತೊರೆಯಬೇಕೆಂದು ಕವಿ ಕುವೆಂಪು ಹೇಳುತ್ತಾರೆ?

ಉ. ಮತಬೇಧಗಳ ಬಿರುಕುಗಳನ್ನು ತೊರೆಯಬೇಕೆಂದು ಕವಿ ಹೇಳುತ್ತಾರೆ.

5. ಕವಿ ಕುವೆಂಪು ಜೀವನವನ್ನು ಯಾರಿಗೆ ಎರೆಯುವೆ ಎನ್ನುತ್ತಾರೆ?

ಉ. ನಮ್ಮ ಜೀವನವನ್ನು ದೇವಿಗೆ ಎರೆಯುವೆ ಎನ್ನುತ್ತಾರೆ.

6. ಕುವೆಂಪು ಅವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ?

ಉ. ಶ್ರೀ ರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

ಆ. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಕುವೆಂಪು ಅವರು ಭಾರತದ ಪ್ರಾಕೃತಿಗೆ ಸಿರಿಯನ್ನು ಏನೆಂದು ವರ್ಣಿಸಿದ್ದಾರೆ?

ಉ. ಹೆತ್ತ ತಾಯಿ ಹೊತ್ತಭೂಮಿ ಸ್ವರ್ಗಕ್ಕಿಂತಲೂ ಮಿಗಿಲು ತಾಯಿ ಮಕ್ಕಳನ್ನು ಹೆತ್ತು ಸಾಕಿ ಸಲಹುತ್ತಾಳೆ ಅದೇ ರೀತಿಯಲ್ಲಿ ಜನ್ಮಭೂಮಿಯು ನಮ್ಮನ್ನು ಹೊತ್ತು ಗಾಳಿ, ನೀರು, ಬೆಳಕು, ಆಹಾರ ನೀಡಿ ಪೋಷಿಸುತ್ತಿದೆ.

2. ನಮ್ಮ ಭಾರತ ದೇಶದಲ್ಲಿ ಹರಿಯುವ ಪ್ರಮುಖ ನದಿಗಳಾವುವು?

ಉ. ನಮ್ಮ ಭಾರತದಲ್ಲಿ ಹರಿಯುವ ಪ್ರಮುಖ ನದಿಗಳು ಸಿಂಧು, ಯಮುನ, ಗಂಗೆ, ತಪತಿ, ಕೃಷ್ಣ, ಭದ್ರ, ತುಂಗೆ ಈ ತೀರ್ಥಗಳು ಹರಿಯುತ್ತದೆ.

3. ಮತದ ಬಿರುಕುಗಳನ್ನು ಏಕೆ ತೊರೆಯಬೇಕು?

ಉ. ಭಾರತೀಯರಾದ ನಾವು ಮತಬೇಧಗಳನ್ನು ತೊರೆದು ಭಾಷಾ ಸಾಮರಸ್ಯದಿಂದ ಬದುಕುವ ಮೂಲಕ ದೇಶದ ಏಳಿಗೆಗ ಜೀವನವನ್ನೇ ಸಮರ್ಪಿಸಬೇಕು.

ಇ. ಕೆಳಗಿನ ಪ್ರಶ್ನೆಗೆ ಏಳು – ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕುವೆಂಪು ಅವರು ಭರತ ಭೂಮಿಯನ್ನು ಯಾವ ರೀತಿಯಲ್ಲಿ ವರ್ಣಿಸಿದ್ದಾರೆ?

ಉ. ಭರತ ಭೂಮಿಯನ್ನು ಹೆತ್ತ ತಾಯಿಗೆ ಹೋಲಿಸಿದ್ದಾರೆ ತಾಯಿ ಮಕ್ಕಳನ್ನು ಲಾಲನೆ, ಪಾಲನೆ ಮಾಡಿ ಪೋಷಿಸುತ್ತಾಳೋ ಹಾಗೆ ಭರತ ಭೂಮಿಯಲ್ಲಿ ನಮ್ಮ ಜೀವನಕ್ಕೆ ಬೇಕಾದ ಎಲ್ಲಾ ಅವಶ್ಯಕತೆಗಳನ್ನು ಒದಗಿಸುತ್ತಾಳೆ (ಗಾಳಿ, ಬೆಳಕು, ನೀರು ವಾಸಿಸಲು ಸ್ಥಳ) ಕವಿ ಕುವೆಂಪು ಅವರು ಭರತ ಭೂಮಿಯನ್ನು ಹೆತ್ತ ತಾಯಿ ಎಂದು ವರ್ಣಿಸಿದ್ದಾರೆ ಇಲ್ಲಿ ಗಿರಿ, ಕಡಲು, ಹಸಿರು ಹಾಗೂ ನದಿಗಳ ಸೌಂದರ್ಯವನ್ನು ಸೊಗಸಾಗಿ ವರ್ಣಿಸಿದ್ದಾರೆ.

## ಭಾಷಾಭ್ಯಾಸ

ಅ. ಕೆಳಗಿನ ಪ್ರಶ್ನೆಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ

1. ಗಿರಿ – ಬೆಟ್ಟ
2. ಕಡಲು – ಸಮುದ್ರ
3. ಭೂಮಿ – ಪೃಥ್ವಿ, ಇಳೆ
4. ತಾಯಿ – ಮಾತೆ
5. ನುಡಿ – ಮಾತು

ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

1. ಪಾಪ × ಪುಣ್ಯ
2. ಸ್ವರ್ಗ × ನರಕ
3. ಸ್ವಾತಂತ್ರ್ಯ × ಅಸ್ವಾತಂತ್ರ್ಯ
4. ಮುಡಿ × ಅಡಿ
5. ಹಿರಿಯ × ಕಿರಿಯ

ಇ. ಪದ್ಯದಲ್ಲಿ ಬಳಕೆಯಾಗಿರುವ ಪ್ರಾಸಪದಗಳನ್ನು ಆಯ್ದು ಬರೆಯಿರಿ.

1. ತೊಟ್ಟಿಲು – ಕಟ್ಟಲು



Scanned with CamScanner

ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ

ದೇವಿಗೆರೆವೆ = ದೇವಿಗೆ + ಎರಗುವೆ

ತೊಳೆಯುವಡಿಯ = ತೊಳೆಯುವೆ + ಅಡಿಯ

ನುಡಿಗಳೊಡಕುಗಳನು = ನುಡಿಗಳ + ಒಡಕುಗಳನು

ಸ್ವರ್ಗಕೇರಿ = ಸ್ವರ್ಗಕ್ಕೆ + ಏರು

ಪುಣ್ಯದೇಣಿ = ಪುಣ್ಯದ + ಏಣಿ

ಈ ಕೆಳಗಿನ ಸೂಕ್ತಿಗಳನ್ನು ವಿವರಿಸಿ ಬರೆಯಿರಿ.

ಜನನಿ, ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು.

ಹೆತ್ತತಾಯಿ, ಹೊತ್ತಭೂಮಿ ಸ್ವರ್ಗಕ್ಕಿಂತಲೂ ಮಿಗಿಲು ಅಂದರೆ ತಾಯ್ನಾಡು ಸ್ವರ್ಗದ ಸುಖಕ್ಕಿಂತ ದೊಡ್ಡದು ಎಂದು ಕವಿ ವರ್ಣಿಸುತ್ತಾರೆ. ತಾಯಿ ಮಕ್ಕಳನ್ನು ಸಾಕಿ ಸಲಹಿ ಬೆಳೆಸುವಂತೆ ನಮ್ಮ ಜನ್ಮಭೂಮಿಯು ನಮ್ಮನ್ನು ಹೊತ್ತು ಗಾಳಿ, ನೀರು, ಬೆಳಕು ಆಹಾರ ನೀಡಿ ಪೋಷಿಸುತ್ತಾಳೆ. ಈ ಭಾಷೆಗಳೊಂದಿಗೆ ಕವಿ ಭರತ ಭೂಮಿಯನ್ನು ತನ್ನ ಹೆತ್ತ ತಾಯಿ ಎಂದು ಬಣ್ಣಿಸಿದ್ದಾಳೆ. ನಮ್ಮ ಭೂಮಿಯಲ್ಲಿ ಗಿರಿ, ಕಡಲು, ಹಸಿರು, ನದಿಗಳ ಸೌಂದರ್ಯವನ್ನು ಸೊಗಸಾಗಿ ವರ್ಣಿಸಿದ್ದಾರೆ. ಇದರ ಮುಖಾಂತರ ತಾಯಿ ಮತ್ತು ತಾಯ್ನಾಡುಗಳು ಎರಡೂ ಒಂದೇ ಎರಡು ಸಮ ಎಂದು ಕವಿ ವರ್ಣಿಸುತ್ತಾನೆ.

2. ದೇಶ ಸೇವೆಯೇ ಈಶ ಸೇವೆ.

ಉ. ನಮ್ಮ ದೇಶ ನಮಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸಿ, ನಮ್ಮನ್ನು ತಾಯಿಯಂತೆ ಪೋಷಿಸಿ ಸಲಹುತ್ತಾಳೆ ಇದನ್ನೆಲ್ಲಾ ಕೊಟ್ಟ ನಮ್ಮ ದೇಶಕ್ಕೆ ನಾವು ಗೌರವದಿಂದ ಕಾಣಬೇಕು ನಾವು ಚಿರ ಋಣಿಯಾಗಿರಬೇಕು ಆದ್ದರಿಂದ ನಾವು ನಮ್ಮ ದೇಶವನ್ನು ಶತ್ರುಗಳಿಂದ ಕಾಪಾಡಬೇಕು ನಾವು ದೇವರನ್ನು ಪೂಜಿಸಿ ಆರಾಧಿಸಿ ಒಲಿಸಿಕೊಳ್ಳಲು ಪ್ರಯತ್ನಿಸುತ್ತೇವೆ ದೇವರನ್ನು ಮೆಚ್ಚಿಸಲು ನಾವು ಎಷ್ಟು ಕಷ್ಟ ಪಡುತ್ತೇವೆಯೋ ಹಾಗೆ ನಮ್ಮ ಎಲ್ಲಾ ಸೌಕರ್ಯಗಳನ್ನು ಕೊಟ್ಟ ತನ್ನ ಭೂಮಿಯಲ್ಲಿ ನಮ್ಮನ್ನು ಬದುಕಲು ಅವಕಾಶ ಮಾಡಿ ಕೊಟ್ಟ ನಮ್ಮ ತಾಯಿಗೆ ನಾವು ತನು, ಮನ, ಧನ ಎಲ್ಲದರಿಂದಲೂ ಸೇವೆ ಸಲ್ಲಿಸಬೇಕು ತ್ಯಾಗಕ್ಕೂ ಸಿದ್ಧವಿರಬೇಕು. ಇದು ದೇವರ ಸೇವೆಯೆಂದೇ ಭಾವಿಸಬೇಕು.

****

Scanned with CamScanner